SEPTEMBER 12, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ, ಭಾರತದಲ್ಲಿ, ಪ್ರಜಾತಂತ್ರ ಜೀವಂತ – ಲೋಕಸಭಾಧ್ಯಕ್ಷ ಓಂ ಬಿರ್ಲಾ.**
- **ಕೃಷ್ಣ ಮೇಲ್ದಂಡೆ 3ನೇ ಹಂತದ ಯೋಜನೆ; ಈ ತಿಂಗಳ 16ರ, ವಿಶೇ ’ ಸಚಿವ ಸಂಪುಟ ಸಭೆಯಲ್ಲಿ, ಅಂತಿಮ ನಿರ್ಧಾರ.**
- **ಆನ್ಲೈನ್ ಗೇಮಿಂಗ್ ವಂಚನೆ: ಸೆನ್ ಪೊಲೀಸ್ ಠಾಣೆಗಳ ಮೂಲಕ, ಸೈಬರ್ ಅಪರಾಧ, ಜನ ಜಾಗೃತಿ, ಅಭಿಯಾನ.**
- **ರಾಮನಗರದಲ್ಲಿ ನಾಳೆ, ಅಂತಾರಾಷ್ಟ್ರೀಯ ರಣಹದ್ದು ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಲೋಕತಂತ್ರದ ಪ್ರತಿಯೊಂದು ಅಂಗ, ಪಾರದರ್ಶಕವಾಗಿರಬೇಕು. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಭಾರತದಲ್ಲಿ, ಪ್ರಜಾತಂತ್ರ ಜೀವಂತವಾಗಿದೆ ಎಂದು, ಲೋಕಸಭಾಧ್ಯಕ್ಷ ಓಂ ಬಿರ್ಲಾ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ನಡೆಯಲಿರುವ, ಕಾಮನ್‌ವೆಲ್ತ್‌ಸಂಸದೀಯ ಸಂಘದ, 11ನೇ ಸಮ್ಮೇಳನವನ್ನು, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಉದ್ಘಾಟಿಸಿ, ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಶಾಸಕಾಂಗದ ಪ್ರತಿನಿಧಿಗಳಾಗಿ ಮಾತ್ರವಲ್ಲ; ಪ್ರಜಾಪ್ರಭುತ್ವದ ರಕ್ಷಕರಾಗಿ ಸಮಾವೇಶಗೊಂಡಿದ್ದು, ಬಿ.ಆರ್.ಅಂಬೇಡ್ಕರ ಅವರ ಮಾತಿನಂತೆ, ಪ್ರಜಾಪ್ರಭುತ್ವ, ಭಾರತಕ್ಕೆ ಹೊಸದಾಗಿ ಆಮದು ಮಾಡಿಕೊಂಡ ಉಡುಗೊರೆಯಲ್ಲ; ಬದಲಾಗಿ ನಮ್ಮ ನಾಗರಿಕತೆಯ ನೀತಿಯಲ್ಲಿ, ಆಳವಾಗಿ ಬೇರೂರಿರುವ ತತ್ವ ಎಂದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ, ವಿಧಾನ ಪರಿ ’ತ್ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ, ಕಾಮನ್‌ವೆಲ್ತ್ 9 ರಾಷ್ಟ್ರಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.**

<><><>

ಕೃಷ್ಣ ಮೇಲ್ದಂಡೆ 3ನೇ ಹಂತದ ಯೋಜನೆಗಾಗಿ, ಜಮೀನು ಕಳೆದುಕೊಳ್ಳುವ, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯ ರೈತರಿಗೆ, ನ್ಯಾಯಯುತ ಪರಿಹಾರ ಹಾಗೂ ಪುನರ್ ವಸತಿ ಕಲ್ಪಿಸಲು, ಈ ತಿಂಗಳ 16 ರಂದು ನಡೆಯುವ, ವಿಶೇ ’ ಸಚಿವ ಸಂಪುಟ ಸಭೆಯಲ್ಲಿ, ಅಂತಿಮ ನಿರ್ಧಾರ, ಕೈಗೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಸಚಿವ ಸಂಪುಟ ಸಭೆ, ಬೆಂಗಳೂರಿನಲ್ಲಿ ಜರುಗಿತು.

<><><>

ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕಿನ, ಗುಳ್ಳಾಪುರ ಗ್ರಾಮದಿಂದ, ಹೆಗ್ಗಾರ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ, ಮಾರ್ಗ ಮಧ್ಯದ, ಗಂಗಾವಳಿ ನದಿಗೆ ಅಡ್ಡಲಾಗಿ, 35 ಕೋಟಿ ರೂಪಾಯಿ ಅಂದಾಜು ಮೊತ್ತದಲ್ಲಿ, ಸೇತುವೆ ನಿರ್ಮಾಣಕ್ಕೆ, ಸಂಪುಟ ಒಪ್ಪಿಗೆ ಸೂಚಿಸಿದೆ.

<><><>

ರಾಯಚೂರು ಜಿಲ್ಲೆ, ಮಾನ್ವಿ ತಾಲೂಕು, ಎಡವಿಹಾಳ ಗ್ರಾಮದ ಬಳಿ, ತುಂಗಭದ್ರಾ ನದಿಯಿಂದ ನೀರನ್ನೆತ್ತಿ, 10 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸುವ, 109 ಕೋಟಿ ರೂಪಾಯಿ ವೆಚ್ಚದ ಯೋಜನೆಗೆ, ಅನುಮೋದನೆ..

<><><>

ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು, ಚಿಕ್ಕಹಟ್ಟಿಹೊಳಿ ಗ್ರಾಮದ ಬಳಿ, ಮಲಪ್ರಭಾ ನದಿಗೆ ಅಡ್ಡಲಾಗಿ, ಬ್ರಿಡ್ಜ್ ಕಂ ಬ್ಯಾರೇಜ್ ಮತ್ತು ರಕ್ಷಣಾ ಗೋಡೆ ನಿರ್ಮಾಣ ಕಾಮಗಾರಿಗೆ, 50 ಕೋಟಿ ರೂಪಾಯಿ ವೆಚ್ಚಕ್ಕೆ, ಒಪ್ಪಿಗೆ..

<><><>

ಹಾವೇರಿ ಜಿಲ್ಲೆ, ಶಿಗ್ಗಾಂವ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ, ನಾಗನೂರು ಕೆರೆ ಅಭಿವೃದ್ಧಿಗಾಗಿ, 105 ಕೋಟಿ 19 ಲಕ್ಷ ರೂಪಾಯಿ ಕಾಮಗಾರಿಯನ್ನು ಸಚಿವ ಸಂಪುಟ ಅನುಮೋದಿಸಿದೆ.

<><><>

ರಾಜ್ಯ ಮಟ್ಟದ, ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ ಹಾಗೂ ಸೈಬರ್ ಜಾಗೃತಿ ಅಭಿಯಾನದ ಅಂಗವಾಗಿ, ಸೆನ್ ಪೊಲೀಸ್ ಠಾಣೆಗಳ ಮೂಲಕ, ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.

<><><>

ಕೇಂದ್ರ ಗೃಹ ಸಚಿವಾಲಯ, ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್, www.cybercrime.gov.in ಮತ್ತು ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಖ್ಯೆ 1-9-3-0 ಆರಂಭಿಸಿದೆ. ಆನ್ಲೈನ್ ಗೇಮಿಂಗ್, ಹಣಕಾಸು ವಂಚನೆ ಹಾಗೂ ಇತರೆ ಸೈಬರ್ ಅಪರಾಧಗಳನ್ನು ತಕ್ಷಣ ದಾಖಲಿಸಲು, ಸಾರ್ವಜನಿಕರಿಗೆ ಅನುವು ಮಾಡಿದೆ.

<><><>

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ.

<><><>

ಗುಂಜನ್ ಆರ್ಯ ಧ್ವನಿ 50 ಸೆಕೆಂದುಗಳು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಪ್ರಧಾನಮಂತ್ರಿಗಳ, ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ, ನಿಯಮಬದ್ಧಗೊಳಿಸುವಿಕೆ ಯೋಜನೆ ಅಡಿ, ಹೊಸ ಉದ್ದಿಮೆ ಆರಂಭಿಸಲು, ಶಿವಮೊಗ್ಗದ, ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಮಾರ್ಗದರ್ಶನ ಹಾಗೂ ಸಹಕಾರ ನೀಡಲಿದೆ ಎಂದು, ಉಪ ಕುಲಪತಿ ಆರ್.ಸಿ ಜಗದೀಶ ತಿಳಿಸಿದ್ದಾರೆ. ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, 100 ಟನ್‌ಗಳ ಸ್ವ ಅಪ್ಪೆ ಮಿಡಿ, ಶಿವಮೊಗ್ಗದಿಂದ ವಿದೇಶಕ್ಕೆ ರಫ್ತಾಗುತ್ತಿದೆ ಎಂದರು. ಜಂಟಿ ಕೃಷಿ ನಿರ್ದೇಶಕ, ಕಿರಣಕುಮಾರ ಮಾಹಿತಿ ನೀಡಿ, ಒಂದು ಜಿಲ್ಲೆ ಒಂದು ಉತ್ಪನ್ನದಡಿ, ಅನಾನಸ್ ಬೆಳೆ ಆಯ್ಕೆ ಮಾಡಲಾಗಿದೆ. ಈ ವರೆಗೆ 344 ಪಿ.ಎಂ.ಎಫ್.ಎಂ.ಇ. ಅರ್ಜಿಗಳಿಗೆ ಬ್ಯಾಂಕ್ ಸಾಲ ಮಂಜೂರಾಗಿದೆ ಎಂದರು.

<><><>

ಪ್ರತಿ ವರ್ಷ ಸೆಪ್ಟೆಂಬರ್ ಮೊದಲ ಶನಿವಾರ, ಅಂತಾರಾಷ್ಟ್ರೀಯ ರಣಹದ್ದು ದಿನ ಆಚರಿಸಲಾಗುತ್ತದೆ. ರಾಮನಗರ ಜಿಲ್ಲೆಯ, ಕರ್ನಾಟಕ ರಣಹದ್ದು ಸಂರಕ್ಷಣಾ ಟ್ರಸ್ಟ್, ಅರಣ್ಯ ಇಲಾಖೆ ಸಹಯೋಗದಲ್ಲಿ, ನಾಳೆ ಅಂತಾರಾಷ್ಟ್ರೀಯ ರಣಹದ್ದು ದಿನ, ಆಚರಿಸಲಿದೆ. ರಾಮನಗರದ ಶ್ರೀಕೃಷ್ಣಮೂರ್ತಿ ಕನವೆನ್ಷನ್ ಹಾಲ್‌ನಲ್ಲಿ ಆಯೋಜಿತ, ಒಂದು ದಿನದ ಶಿಬಿರದಲ್ಲಿ, 500ಕ್ಕೂ ಹೆಚ್ಚು ಜನ, ರಾಜ್ಯದ ವಿವಿಧೆಡೆಯಿಂದ, ಪಾಲ್ಗೊಳ್ಳಲಿದ್ದಾರೆ. ರಣಹದ್ದುಗಳ ಬಗ್ಗೆ ವಿಶೇಷ ಅಧ್ಯಯನ ಕೈಗೊಂಡಿರುವ, ವನ್ಯಜೀವಿ ತಜ್ಞರುಗಳಾದ ಸತ್ಯಪ್ರಮೋದ, ಕ್ರಿಸ್ ಬೌವ್ಡೆನ್, ವಿಭು ಪ್ರಕಾಶ, ಎಸ್. ಭಾರತಿದಾಸನ್ ಹಾಗೂ ಮಹಮ್ಮದ ಮನಸೂರ ಪಾಲ್ಗೊಂಡು, ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ಮಾಡಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವನ್ಯಜೀವಿ ಸಂರಕ್ಷಕ ದರ್ಶನ.

<><><>

ದರ್ಶನ ಧ್ವನಿ 48 ಸೆಕೆಂದುಗಳು

<><><>

'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಧ್ಯೇಯದೊಂದಿಗೆ, ನಾಳೆ, 13 ರಂದು, 3ನೇ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿತವಾಗಿದೆ. ಹೆಚ್ಚಿನ ಮಾಹಿತಿಗೆ, ನಾಲ್ಸಾ ಕಾನೂನು ಉಚಿತ ಸಹಾಯವಾಣಿ, 1-5-1-0-0 ಗೆ ಕರೆ ಮಾಡಬಹುದು. ಜುಲೈ 1 ರಿಂದ ಈ ತಿಂಗಳ 30ರ ವರೆಗೆ,90 ದಿನಗಳ, ವಿಚಾರಣಾ ಹಂತದ ಪ್ರಕರಣಗಳನ್ನು, ಕಕ್ಷಿದಾರರು ರಾಜೀ ಸಂಧಾನದ ಮೂಲಕ, ಬಗೆಹರಿಸಿಕೊಳ್ಳಲು, ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳು, ಅವಕಾಶ ಕಲ್ಪಿಸಿವೆ.

<><><>

ಖ್ಯಾತ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರ, ಮಲ್ಲಿಕಾರ್ಜುನ ಮನಸೂರ ಅವರ, 33ನೇ ಪುಣ್ಯತಿಥಿ ಹಿನ್ನೆಲೆ, ಇಂದು ಬೆಳಗ್ಗೆ 9.30ಕ್ಕೆ, ಅವರ ಶಿಷ್ಯ ಬಳಗ, ಧಾರವಾಡದಲ್ಲಿರುವ ಸಮಾಧಿಗೆ ಗೌರವ ಅರ್ಪಿಸಲಿದೆ. ಸಂಜೆ 5:30ಕ್ಕೆ, ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಬೆಂಗಳೂರಿನ ಶಡ್ಜ ಗೋಡ್ಬಿಂಡಿ, ಕೊಳಲು ವಾದನ, ದತ್ತಾತ್ರೇಯ ವೇಲಣಕರ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನ ಪ್ರಸ್ತುತ ಪಡಿಸಲಿದ್ದಾರೆ ಎಂದು, ಟ್ರಸ್ಟ್ ಅಧ್ಯಕ್ಷ ಪಂಡಿತ ಎಂ. ವೆಂಕಟೇಶಕುಮಾರ ತಿಳಿಸಿದ್ದಾರೆ.

<><><>

ಮುಂದಿನ ನಾಲ್ಕೈದು ದಿನಗಳ ವರೆಗೆ, ರಾಜ್ಯಾದ್ಯಂತ ಭಾರೀ ಮಳೆಯಾಗುವ ನಿರೀಕ್ಷೆ ಇದೆ ಎಂದು, ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇಂದು ಮತ್ತು ನಾಳೆ, ರಾಜ್ಯದ ಎಲ್ಲ 31 ಜಿಲ್ಲೆಗಳಿಗೆ, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

<><><>

ಲಿಂಗತ್ವ ಅಲ್ಪಸಂಖ್ಯಾತರು ಮತ್ತು ವಿಮುಕ್ತ ದೇವದಾಸಿಯರ, ಮರು ಸಮೀಕ್ಷೆ, ಇದೇ 15 ರಿಂದ 45 ದಿನಗಳ ಕಾಲ ಗದಗ ಜಿಲ್ಲೆಯಲ್ಲಿ ನಡೆಯಲಿದೆ. ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಸಮೀಕ್ಷೆಯ ಭಿತ್ತಿಪತ್ರ ಬಿಡುಗಡೆ ಮಾಡಿದರು.

<><><>

ಹಾವೇರಿ ಜಿಲ್ಲೆ, ಮರೊಳ ಗ್ರಾಮದಲ್ಲಿ, ಹಣಕಾಸು ಸೇರ್ಪಡೆ ಪರಿಪೂರ್ಣತೆ ಅಭಿಯಾನದಲ್ಲಿ, ಆರ್ಥಿಕ ಮತ್ತು ಸಾಮಾಜಿಕ ಸುರಕ್ಷಾ ಯೋಜನೆಗಳ ಕುರಿತು, ಗ್ರಾಮಸ್ಥರಿಗೆ ಮಾಹಿತಿ ನೀಡಲಾಯಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ, ಭಾರತದಲ್ಲಿ, ಪ್ರಜಾತಂತ್ರ ಜೀವಂತ – ಲೋಕಸಭಾಧ್ಯಕ್ಷ ಓಂ ಬಿರ್ಲಾ.
- ಕೃಷ್ಣ ಮೇಲ್ದಂಡೆ 3ನೇ ಹಂತದ ಯೋಜನೆ; ಈ ತಿಂಗಳ 16ರ, ವಿಶೇ ’ ಸಚಿವ ಸಂಪುಟ ಸಭೆಯಲ್ಲಿ, ಅಂತಿಮ ನಿರ್ಧಾರ.
- ಆನ್ಲೈನ್ ಗೇಮಿಂಗ್ ವಂಚನೆ: ಸೆನ್ ಪೊಲೀಸ್ ಠಾಣೆಗಳ ಮೂಲಕ, ಸೈಬರ್ ಅಪರಾಧ, ಜನ ಜಾಗೃತಿ, ಅಭಿಯಾನ.
- ರಾಮನಗರದಲ್ಲಿ ನಾಳೆ, ಅಂತಾರಾಷ್ಟ್ರೀಯ ರಣಹದ್ದು ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>